# <u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **: 1132** |
| ಸದಸ್ಯರ ಹೆಸರು | :ಶ್ರೀ ಎಂ.ಎಲ್.ಅನಿಲ್ ಕುಮಾರ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ತ್ತರಿಸುವ ದಿನಾಂಕ | : **28.12.2022.** |
| ಉತ್ತರಿಸುವ ಸಚಿವರು | : ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಈವರೆವಿಗೂ ಮರಗಳ ಹಕ್ಕುದಾರಿ ಜಮೀನು ಮಂಜೂರು ಮಾಡಿರುವ ಪ್ರಕರಣಗಳೆಷ್ಟು; (ವಿವರ ನೀಡುವುದು) | ಕೋಲಾರ ಜಿಲ್ಲೆಯಲ್ಲಿ ಮರಗಳ ಹಕ್ಕುದಾರಿ ಮಂಜೂರು ಮಾಡಿರುವ ಪ್ರಕರಣಗಳ ಸಂಖ್ಯೆ:32 ಇದ್ದು, ಯಾವುದೇ ಹಕ್ಕುದಾರಿ ಜಮೀನು ಮಂಜೂರು ಮಾಡಿರುವುದಿಲ್ಲ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆ ಮರಗಳ ಹಕ್ಕುದಾರಿ ಮಂಜೂರು ಮಾಡಿರುವ ಪ್ರಕರಣಗಳ ಸಂಖ್ಯೆ:07 |
| ಆ) | ಹಕ್ಕುದಾರಿ ಮರಗಳು/ ಜಮೀನು ಮಂಜೂರು ಮಾಡಲು ಬಾಕಿ ಇರುವ ಪ್ರಕರಣಗಳೆಷ್ಟು; | ಹಕ್ಕುದಾರಿ ಮರಗಳು/ಜಮೀನು ಮಂಜೂರು ಮಾಡುವ ಯಾವುದೇ ಪ್ರಕರಣ ಬಾಕಿ ಇರುವುದಿಲ್ಲ. |
| ಇ) | ಪ್ರಸ್ತುತ ಹಕ್ಕುದಾರಿ/ ತೋಪು/ಧರ್ಮತೋಪು/ಜಮೀನುಗಳ ಮಂಜೂರಾತಿ ಪ್ರಕ್ರಿಯೆ ಇದೆಯೇ; ಇಲ್ಲದಿದ್ದಲ್ಲಿ, ಇರುವ ಕಾನೂನು ತೊಡಕುಗಳೇನು; ಈ ವಿಚಾರದಲ್ಲಿ ಕರ್ನಾಟಕ ಭೂ ಕಂದಾಯ (ನಿಯಮ 102 ಮತ್ತು 102ಎ ) ನಿಯಮಗಳಿಗೆ ಸೂಕ್ತ ತಿದ್ದುಪಡಿ ತರಲು ಪ್ರಸ್ತಾವನೆ ಇದೆಯೇ; (ಸಂಪೂರ್ಣವಾದ ವಿವರ ನೀಡುವುದು) | ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 102 ಮತ್ತು 102ಎ ಗೆ ತಿದ್ದುಪಡಿ ತರುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |
| ಈ) | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ತೋಪು/ಧರ್ಮತೋಪು ಹಾಗೂ ಇತರೆ ಹಕ್ಕುದಾರಿ ಮಂಜೂರಾತಿ ಜಮೀನುಗಳಲ್ಲಿ ಬಡವರು/ಕಡುಬಡವರು ಜಮೀನಿನ ಅನುಭವದಲ್ಲಿರುವ ಪ್ರಕರಣಗಳೆಷ್ಟು; (ಪ್ರತ್ಯೇಕವಾಗಿ ಸ.ನಂ. ಮತ್ತು ವಿಸ್ತೀರ್ಣದೊಂದಿಗೆ ನಿಖರವಾದ ಜಿಲ್ಲಾವಾರು/ತಾಲ್ಲೂಕುವಾರು ಮಾಹಿತಿ ನೀಡುವುದು) | ಕೋಲಾರ ಜಿಲ್ಲೆಯಲ್ಲಿ ಇಂತಹ ಪ್ರಕರಣ ಕಂಡುಬಂದಿರುವುದಿಲ್ಲ.<br><br>ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು, ಮುಂಗಾನಹಳ್ಳಿ ಹೋಬಳಿ, ಗುಡಿವಾಬನಹಳ್ಳಿ ಗ್ರಾಮದ ಸ.ನಂ.18 ರಲ್ಲಿ 1-20 ಎಕರೆ/ಗುಂಟೆ ಜಮೀನು ಹಕ್ಕುದಾರಿ ಕೋರಿ ಶ್ರೀ ಬಿ.ಆರ್.ಕೋನಪ್ಪರೆಡ್ಡಿ ಬಿನ್ ಬೈಯಣ್ಣ, ರಾಗುಟ್ಟಹಳ್ಳಿ ರವರು ಮಾನ್ಯ ಕೆ.ಎ.ಟಿ ನಲ್ಲಿ ಪ್ರಕರಣ ದಾಖಲಿಸಿದ್ದು, ಸದರಿ ನ್ಯಾಯಾಲಯವು |

| | | |
|---|---|---|
| | | ಜಿಲ್ಲಾಧಿಕಾರಿಗಳ ಆದೇಶವನ್ನು ರದ್ದುಪಡಿಸಿ, ಅರ್ಜಿದಾರರ ಮನವಿಯನ್ನು ನಿಯಮಾನುಸಾರ ಇತ್ಯರ್ಥಪಡಿಸಲು ಸೂಚಿಸಿರುವ ಮೇರೆಗೆ ಜಿಲ್ಲಾಧಿಕಾರಿಯ ಪ್ರಕರಣ ಸಂಖ್ಯೆ:ಎಫ್.ಓ. ಆರ್.ಸಿ.ಆರ್/ 03/1994-95 ರಂತೆ ದಾಖಲಾಗಿ ವಿವಿಧ ದಿನಾಂಕಗಳಂದು ವಿಚಾರಣೆ ನಡೆದು ದಿನಾಂಕ:26/08/2022 ರಂದು ಅಂತಿಮ ಆದೇಶಕ್ಕೆ ಕಾಯ್ದಿರಿಸಲಾಗಿದ್ದು, ಶೀಘ್ರವಾಗಿ ಆದೇಶವನ್ನು ಹೊರಡಿಸಲಾಗುವುದು. |
| ಉ) | ಇಂತಹ ಜಮೀನುಗಳನ್ನು ಈ ಹಿಂದೆ ಫಲಾನಿಭವಿಗಳಿಗೆ ಮಂಜೂರು ಮಾಡಿರುವ ಪ್ರಕರಣಗಳೆಷ್ಟು; ಹಾಗೂ ಪ್ರಸ್ತುತ ಮಂಜೂರಾತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಕೋಲಾರ ಜಿಲ್ಲೆಯಲ್ಲಿ ಇಂತಹ ಜಮೀನುಗಳನ್ನು ಮಂಜೂರು ಮಾಡಿರುವ ಯಾವುದೇ ಪ್ರಕರಣಗಳು ಇರುವುದಿಲ್ಲ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಮರಗಳ ಹಕ್ಕುದಾರಿ ಮಂಜೂರು ಮಾಡಿರುವ ಪ್ರಕರಣಗಳ ಸಂಖ್ಯೆ:07. ಕರ್ನಾಟಕ ಭೂ ಕಂದಾಯ ನಿಯಮಗಳು 1966 ನಿಯಮ 102 ಮತ್ತು 102ಎ ರನ್ವಯ ಕ್ರಮವಹಿಸಲು ಅವಕಾಶ ಕಲ್ಪಿಸಲಾಗಿದೆ. |

ಸಂಖ್ಯೆ: ಆರ್‌ಡಿ 313 ಎಲ್‌ಜಿಕ್ಯೂ 2022

**(ಆರ್.ಅಶೋಕ)**
ಕಂದಾಯ ಸಚಿವರು